೬. ನವಲಗುಂದ ತಾಲ್ಲೂಕು ನಾಗನೂರು ಗ್ರಾಮದಲ್ಲಿ ಮುಸಲ್ಮಾನರಿಗೆ ಪ್ರತ್ಯೇಕ ಸ್ಮಶಾನವಿಲ್ಲದಿರುವುದರ ಬಗ್ಗೆ.

ಶ್ರೀ ಎಂ. ಕೆ. ಕುಲಕರ್ಣಿ.—ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ನಾಗನೂರು ಗ್ರಾಮದಲ್ಲಿ ಎಲ್ಲ ಮತದವರಿಗೂ ಸ್ಮಶಾನವಿದ್ದರೂ ಮುಸಲ್ಮಾನರಿಗೆ ಪ್ರತ್ಯೇಕ ಸ್ಮಶಾನವಿರುವುದಿಲ್ಲ. ಇದರಿಂದಾಗಿ ಮುಸ್ಲಿಮರಿಗೆ ಬಹಳ ತೊಂದರೆಯಾಗುತ್ತಿದ್ದು, ಅವರಿಗೆ ಸ್ಮಶಾನಕ್ಕಾಗಿ ಪ್ರತ್ಯೇಕ ಸ್ಥಳವನ್ನು ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ

ಶ್ರೀ ಎಸ್. ಆರ್. ಬೊಮ್ಮಾಯಿ.—ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ನಾಗನೂರು ಗ್ರಾಮದಲ್ಲಿ ಎಲ್ಲ ಮತದವರೂ ಸ್ಮಶಾನವನ್ನು ಹೊಂದಿದ್ದಾರೆ, ಮುಸ್ಲಿಂ ಬಾಂಧವರು ಪ್ರತ್ಯೇಕವಾದ ಸ್ಮಶಾನವನ್ನು ಹೊಂದಿರುವುದಿಲ್ಲವೆಂಬ ಅಂಶ ನಿಜವಿರುತ್ತದೆ. ಸದರಿ ಗ್ರಾಮದಲ್ಲಿ ಮುಸ್ಲಿಂ ಬಾಂಧವರಿಗೆ ಅಂತ್ಯಕ್ರಿಯೆ ಜರುಗಿಸಲು ಸ್ಮಶಾನ ಇರುವುದಿಲ್ಲವಾದ್ದರಿಂದ ಈಗಾಗಲೇ ಜಿಲ್ಲಾಧಿಕಾರಿ ಧಾರವಾಡ ಇವರಿಗೆ ಮುಸ್ಲಿಂ ಬಾಂಧವರು ಮನವಿಯನ್ನು ಸಲ್ಲಿಸಿದ್ದು ಸದರಿ ಮನವಿ ಬಗ್ಗೆ ಉಪ ವಿಭಾಗಾಧಿಕಾರಿ, ಧಾರವಾಡ ಇವರು ಸೂಕ್ತ ವಿಚಾರಣೆಯನ್ನು ನಡೆಸುತ್ತಿದ್ದಾರೆ. ಮುಂಜೂರಾತಿಗೆ ಸರ್ಕಾರಿ ಜಮೀನು ಲಭ್ಯವಿರದೆ ಇರುವ ಪ್ರಯುಕ್ತ ಭೂಸ್ವಾಧೀನ ಮಾಡುವ ಬಗ್ಗೆ ಕ್ರಮ ಕೈಕೊಳ್ಳಲಾಗುತ್ತಿದೆ. ಅಲ್ಲಿ ಜಮೀನು ಇಲ್ಲದಿರುವುದರಿಂದ ಅಕ್ವಿಜಿಷನ್ ಮಾಡಿ ಒದಗಿಸಿಕೊಡುತ್ತೇವೆ.

೭. ಉಡುಪಿ ಮತದಾರರ ಕ್ಷೇತ್ರದಲ್ಲಿ ಇನ್ನೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವುದರ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್.—೧೯ ಹೈಸ್ಕೂಲುಗಳು, ೫ ಪದವಿ ಪೂರ್ವ ಕಾಲೇಜುಗಳು ಇರುವ ಉಡುಪಿ ವಿಧಾನಸಭಾ ಮತದಾರ ಕ್ಷೇತ್ರದಲ್ಲಿ ಇರುವ ಏಕೈಕ ಪ್ರಥಮ ದರ್ಜೆ ಕಾಲೇಜು ಗಳಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲದೆ ಬಹಳಷ್ಟು ವಿದ್ಯಾರ್ಥಿಗಳು ದೂರದ ಊರುಗಳಿಗೆ ಹೋಗ ಬೇಕಾಗಿದೆ. ಅನುಕೂಲವಿಲ್ಲದ ಬಡ ಹಾಗೂ ಮಧ್ಯಮ ವರ್ಗದವರು ಕಾಲೇಜು ಶಿಕ್ಷಣದ ಆಸೆಗೇ ತಿಲಾಂಜಲಿ ನೀಡಬೇಕಾಗಿದೆ. ಇಡೀ ಉಡುಪಿ ತಾಲ್ಲೂಕಿನಲ್ಲಿ ಒಂದೇ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲ. ನನ್ನ ಮತದಾರ ಕ್ಷೇತ್ರದಲ್ಲಿ ಉಡುಪಿ, ಮಲ್ಪೆ, ಹಿರಿಯಂಡಕಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಪರಂತು, ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ತೀರಾ ಚಿಂತಾಜನಕವಾಗಿರುವುದರಿಂದ, ಮೇಲೆ ಸೂಚಿಸಿದ ಸ್ಥಳಗಳಲ್ಲಿ ಒಂದರಲ್ಲಾದರೂ ಸರ್ಕಾರಿ ಕಾಲೇಜು ತೆರೆಯುವ ಮೂಲಕ ಸರ್ಕಾರ, ವಿದ್ಯಾರ್ಥಿ ಸಮುದಾಯದ ಹಿತರಕ್ಷಣೆಗೆ ಬರಬೇಕೆಂದೂ, ಉಳಿದೆಡೆಗಳಲ್ಲಿ ಮುಂದಿನ ವರ್ಷಗಳಲ್ಲಿ ತೆರೆಯಬೇಕೆಂದೂ, ಮನುಕುಲದ ಮಮತೆಯ ಆರಾಧ್ಯ ದೇವತೆ ಶ್ರೀಕೃಷ್ಣನ ಸನ್ನಿಧಿಯ ಪರಿಸರದಲ್ಲಿ ಸರ್ಕಾರ ಸಹೃದಯತೆಯಿಂದ ಈ ಸವಲತ್ತು ಕಲ್ಪಿಸಿದಲ್ಲಿ, ಸಹಸ್ರಾರು ಮಕ್ಕಳ ಹಾಗೂ ಪೋಷಕರ ಶುಭಾಶಯ ಸರ್ಕಾರಕ್ಕೆ ದೊರಕಿ, ಆಗಲಾದರೂ ಆರ್ಥಿಕ ಪರಿಸ್ಥಿತಿ ಸುಧಾರಿಸಬಹುದಾಗಲೆಂದು ಹಾರೈಸುತ್ತೇನೆ.

ಶ್ರೀ ಎಂ. ರಘುಪತಿ.—ಉಡುಪಿಯಲ್ಲಿ ಒಂದು ಪ್ರಥಮ ದರ್ಜೆ ಕಾಲೇಜಿನ ಅವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ವಿಶ್ವವಿದ್ಯಾನಿಲಯದವರ ಪರವಾನಗಿಯನ್ನು ಪಡೆದು (ಪರವಾನಗಿ ಬಂದಮೇಲೆ) ಆದ್ಯತೆ ಮೇರೆಗೆ ಕಾಲೇಜು ಪ್ರಾರಂಭಿಸುವುದಕ್ಕೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರಯತ್ನಿಸುತ್ತೇವೆ.

೮. ಶಿಕಾರಿಪುರ ನಗರದ ಕಂಬೈಂಡ್ಡ್ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲದಿರುವುದರ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿಕಾರಿಪುರ ನಗರದ ಕಂಬೈಂಡ್ ಆಸ್ಪತ್ರೆಯಲ್ಲಿ ೬ ಜನ ನಾಲ್ಕನೇ ದರ್ಜೆ ನೌಕರರು, ಮೇಲ್‌ನರ್ಸ್, ಹಲ್ಲಿನ ಡಾಕ್ಟರ್ ಇತರೆ ಸಿಬ್ಬಂದಿ ಇಲ್ಲದೆ ಅಲ್ಲಿ ಬರುವ ರೋಗಿಗಳಿಗೆ ತುಂಬಾ ತೊಂದರೆಯಾಗಿದೆ.

ಈ ಕಂಬೈಂಡ್ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆ ಆಗಿ ಪರಿವರ್ತನೆಗೊಂಡಿದ್ದು ಹೆಚ್ಚಿನ ಸಿಬ್ಬಂದಿ ನೇಮಿಸಂವ ಬದಲು ಇರುವ ಸಿಬ್ಬಂದಿ ವರ್ಗದವರನ್ನು ಭರ್ತಿ ಮಾಡದೆ ಇರುವುದೂ ಗ್ರಾಮಾಂತರ ಪ್ರದೇಶದ ಜನತೆಗೆ ಸರ್ಕಾರದಲ್ಲಿರುವ ನಿರ್ಲಕ್ಷ್ಯಕ್ಕೆ ಸಾಕ್ಷಿ ಆಗಿದೆ.

ಈ ಆಸ್ಪತ್ರೆಗೆ ಸರ್ಕಾರದಿಂದ ಮಂಜೂರಾಗಿರುವ ಸಿಬ್ಬಂದಿ ವಿವರ–ಯಾವ ವರ್ಷದಿಂದ ಈ ಹುದ್ದೆಗಳು ಖಾಲಿ ಇವೆ–ಇವನ್ನು ಯಾವಾಗ ಭರ್ತಿ ಮಾಡಲಾಗುವುದು ಎಂಬ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಉತ್ತರವನ್ನು ಒದಗಿಸಿಕೊಡುತ್ತೇನೆ.

೯. ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿರುವ ಹಳ್ಳಿಗಳಿಗೆ ಬಸ್ ಸೌಲಭ್ಯವಿಲ್ಲದಿರುವುದರ ಬಗ್ಗೆ,

ಶ್ರೀ ಜಿ. ಎಸ್. ಆಚಾರ್.—ದಕ್ಷಿಣ ಕನ್ನಡ ಜಿಲ್ಲೆಯ ಉತ್ತರದ ಕೊನೆಯಲ್ಲಿ ಹಾಗೂ ಉತ್ತರ ಕನ್ನಡ ಜಿಲ್ಲೆಯಂ ದಕ್ಷಿಣದ ತುದಿಯಲ್ಲಿರುವ ಉದೂರು, ಕೂಡಳ್ಳಿ, ಹೊಸೂರು, ಅತ್ಯಾಡಿ, ಕುಲ್ಲಂಗಿ, ಗೋಳಿಬೇರು, ಸಾರಕ್ಕಿ, ಕೋಸಳ್ಳಿ, ಕಡಕೆ ಮೊದಲಾದ ಹಳ್ಳಿಗಳಿಗೆ ಬಸ್ ಸೌಲಭ್ಯವಿಲ್ಲ. ಸರ್ಕಾರ ಸುಮಾರು ೨೫ ಲಕ್ಷ ರೂ. ವೆಚ್ಚದಿಂದ ರಸ್ತೆ ನಿರ್ಮಿಸಿದ್ದು, ಈ ರಸ್ತೆ ಕರಾವಳಿಯ ರಾಷ್ಟ್ರೀಯ ಹೆದ್ದಾರಿ ನಂ ೧೭ ಅನ್ನು ಕೂಡುತ್ತದೆ. ದಿನಂಪ್ರತಿ ಸಾವಿರಾರು ವಿದ್ಯಾರ್ಥಿಗಳು, ಸಹಸ್ರಾರು ರೈತರು ವ್ಯಾಪಾರ, ವಿದ್ಯೆ, ವೈದ್ಯಕೀಯ, ಕಛೇರಿ ಕಾರ್ಯ ಇತ್ಯಾದಿಗಳಿಗಾಗಿ ಏಳೆಂಟು ಮೈಲು ನಡೆಯಬೇಕಾದ ದಾರುಣ ಪರಿಸ್ಥಿತಿ ಈ ಕಾಲದಲ್ಲೂ ಇವೆ. ಭಟ್ಕಳ–ಬೈಂದೂರು ರಾಜ್ಯ ರಾಷ್ಟ್ರೀಕೃತ ದಾರಿಯಾಗಿರುವುದರಿಂದ, ಪ್ರತಿದಿನ ಭಟ್ಕಳ ಡಿಪೋದಿಂದ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ಶಿರೂರು, ಉದೂರು, ಕೂಡಳ್ಳಿ, ಕುಲ್ಲಂಗಿ ಮೂಲಕ ಬೈಂದೂರಿಗೆ ಹಾಗೂ ಬೈಂದೂರಿನಿಂದ ಅದೇ ದಾರಿಯಲ್ಲಿ ಭಟ್ಕಳಕ್ಕೆ–ಹೀಗೆ ಕನಿಷ್ಟ ಮೂರು ಬಸ್ ಸರ್ವಿಸ್‌ಗಳನ್ನು ವಿಸ್ತರಿಸಬೇಕಾಗಿಯೂ, ಶತಮಾನಗಳಿಂದ ಅಲಕ್ಷಿತವಾದ ಈ ಭಾಗಕ್ಕೆ ಅಭಿವೃದ್ಧಿ ಹೊಂದಿದ ಪ್ರದೇಶದೊಡನೆ ಸಂಪರ್ಕ ಕಲ್ಪಿಸುವ ಮೂಲಕ ಕುಗ್ರಾಮಗಳಲ್ಲಿನ ಕತ್ತಲೆ ಬಿಡಿಸಿ ಬೆಳಕು ಕಾಣಿಸುವ ಪವಿತ್ರ ಕಾರ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕರಾರಂವಾಕ್ಕಾಗಿ ಶೀಘ್ರ ಕಾರ್ಯ ನಿರ್ವಹಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಡೆಲ್ಲಿಯಲ್ಲಿದ್ದಾರೆ. ಅವರು ಇವತ್ತು ಬರುತ್ತಿದ್ದಾರೆ. ಬಂದ ತಕ್ಷಣ ಸಮಾಲೋಚನೆ ಮಾಡಿ ಉತ್ತರ ಒದಗಿಸಿ ಕೊಡುತ್ತೇನೆ.

10) ಬೀಳಗಿ ತಾಲ್ಲೂಕಿನ ಅನಗವಾಡಿಯ ಹತ್ತಿರ ಸೊಲ್ಲಾಪುರ ರಸ್ತೆಗೆ ಸೇತುವೆ ನಿರ್ಮಿಸಂವ ಬಗ್ಗೆ

ಶ್ರೀ ಬಾಯಿರೆಡ್ಡಿ ವಿ ತುಂಗಳ್.—ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರ ಬೀಳಗಿ ತಾಲ್ಲೂಕಿನ ಅನಗವಾಡಿಯಂ ಹತ್ತಿರ ಅಂದರೆ ಹಂಬ್ಬಳ್ಳಿ ಸೊಲ್ಲಾಪುರ ರಸ್ತೆಯಲ್ಲಿ ಘಟಪ್ರಭಾ ನದಿಗೆ ಅಡ್ಡವಾಗಿ ಸುಮಾರು ೨ ಕೋಟಿ ೬೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬೃಹತ್ ಸೇತುವೆಯೊಂದನ್ನು ಕಟ್ಟಬೇಕೆಂಬ ಯೋಜನೆಗೆ ಸರಕಾರ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಲೋಕೋಪಯೋಗಿ ಸಚಿವ ಶ್ರೀ ದೇವೇಗೌಡರು ಕಳೆದವರ್ಷ ಅಕ್ಟೋಬರ್ ೧೬ರಂದು ಈ ಬೃಹತ್ ಸೇತುವೆಗೆ ಅಡಿಪಾಯ ಹಾಕಿದ್ದಾರೆ. ಕಳೆದ ಬೇಸಿಗೆಯಲ್ಲಿ ಆರಂಭವಾಗಬೇಕಾಗಿದ್ದ ಈ ಸೇತುವೆಯ ಕಾರ್ಯ ಇನ್ನೂ ಆರಂಭವಾಗದ ಕಾರಣ ಬೀಳಗಿ ಹಾಗೂ ಬಾಗಲಕೋಟೆ ತಾಲೂಕುಗಳ ಜನತೆ ಆತಂಕಗೊಂಡಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೋಪ್ರ್ ಕೊಲ್ಲಾರ ಸೇತುವೆ ಶೀಘ್ರವೇ ಮುಳುಗುವುದರಿಂದ ವಿಜಾಪುರ ಜಿಲ್ಲೆಯ ದಕ್ಷಿಣ ಹಾಗೂ ಉತ್ತರ ಭಾಗಗಳ ಸಂಪರ್ಕಕ್ಕೆ ಈ ಸೇತುವೆಯೊಂದೇ ಸಾಧನವಾಗಿದೆ. ಬಹಳ ದೊಡ್ಡ ಮೊತ್ತದ ಹಣವನ್ನು ಈ ಸೇತುವೆಗೆ ನಿಗದಿಪಡಿಸಿರುವುದರಿಂದ ಕೂಡಲೇ